ಅ) ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಗುರುತಿಸಿ ಪ್ರಸ್ತಾವನೆಯನ್ನು ತಯಾರಿಸಲಾಗಿದೆಯೆ?

ಆ) ತಯಾರಿಸಿದಲ್ಲಿ ತಾಲ್ಲೂಕುವಾರು ಅವಶ್ಯಕತೆ ಇರುವ ಕೇಂದ್ರಗಳೇಷ್ಟು?

ಇ) ಈ ಪ್ರಸ್ತಾವನೆ ಯಾವ ಹಂತದಲ್ಲಿದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು): ಅ) ಹೌದು

ಆ) ತಾಲ್ಲೂಕುವಾರು ಅವಶ್ಯಕತೆ ಇರುವ ಕೇಂದ್ರಗಳ ವಿವರ ಈ ಕೆಳಗಿನಂತಿರುತ್ತದೆ.

1.	ಚಿಕ್ಕನಾಯಕನಹಳ್ಳಿ	-	102
2.	ಗುಬ್ಬಿ	-	126
3.	ತಿಪಟೂರು	-	75
4.	ತುಮಕೂರು (ಗ್ರಾ)	-	146
5.	ತುರುವೇಕೆರೆ	-	70
6.	ಕೊರಟಗೆರೆ	-	35
7.	ಕುಣಿಗಲ್	-	52
8.	ಮಧುಗಿರಿ	-	140
9.	ಪಾವಗಡ	-	63
10.	ಶಿರಾ	-	81
11.	ತುಮಕೂರು ನಗರ	-	25
			915

ಇ) ಪ್ರಸ್ತಾವನೆಯನ್ನು ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಲಾಗಿದೆ.

ತೆಂಗಿನ ನುಸಿ ರೋಗ ನಿಯಂತ್ರಣ

1425 (1708) ಶ್ರೀ ಶಿವಣ್ಣ ಎಸ್. (ತುಮಕೂರು): ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001-02ನೇ ಸಾಲಿನಲ್ಲಿ ತೆಂಗಿನ ನುಸಿರೋಗ ನಿಯಂತ್ರಿಸಲು ಖರೀದಿಸಲಾದ ಔಷಧಿಯೆಷ್ಟು? ಇದರ ಮೌಲ್ಯವೆಷ್ಟು?

ಆ) ಈ ಔಷಧಿಯನ್ನು ಪೂರ್ಣ ಪ್ರಮಾಣದಲ್ಲಿ ರೈತರಿಗೆ ವಿತರಿಸಲಾಯಿತೇ? ಇಲ್ಲವಾದಲ್ಲಿ ಉಳಿಕೆ ಎಷ್ಟು? ಉಳಿಕೆ ಔಷಧಿಯ ಮೊತ್ತವೆಷ್ಟು?

ಇ) ಈ ಔಷಧಿ ಖರೀದಿಗೆ ಸರ್ಕಾರ ನೀಡಿದ ಸಬ್ಸಿಡಿ ಮೊತ್ತವೆಷ್ಟು?

ಈ) ರಾಜ್ಯದಲ್ಲಿ ಈ ಔಷಧ ಉಪಯೋಗಿಸಿದ ನಂತರ ಹಾನಿಗೊಳಗಾದ ತೆಂಗಿನ ಮರದ ಬೆಳೆ ಅಂದಾಜು ಮಾಡಲಾಗಿದೆಯೇ? ಮಾಡಿದ್ದಲ್ಲಿ ಅದರ ಮೊತ್ತವೆಷ್ಟು?

ಉ) ನುಸಿ ರೋಗ ನಿಯಂತ್ರಣಕ್ಕೆ ಜಿಲ್ಲಾ ಮಟ್ಟದಲ್ಲಿ ಹಾಗೂ ತಾಲ್ಲೂಕು ಮಟ್ಟದಲ್ಲಿ ರಚಿಸಲಾಗಿದ್ದ ಟಾಸ್ಕ್ ಫೋರ್ಸ್ ಕಮಿಟಿಗಳು ಈ ಔಷಧಿಯಿಂದ ಹಾನಿಯಾದ ಅಥವಾ ಉಪಯೋಗವಾದ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸಿದೆಯೆ?

ಶ್ರೀ ಎಂ.ಶಿವಣ್ಣ (ತೋಟಗಾರಿಕೆ ಸಿವರು):

ಅ) 2001-02ನೇ ಸಾಲಿನಲ್ಲಿ ತೆಂಗಿನ ನುಸಿ ನಿಯಂತ್ರಣೆಗಾಗಿ 2.31 ಲಕ್ಷ ಲೀಟರ್ ಔಷಧಿಯನ್ನು ಖರೀದಿಸಲಾಗಿದೆ. ಇದರ ಮೌಲ್ಯ ರೂ.960.00 ಲಕ್ಷಗಳು.

ಆ) ಇಲ್ಲ. 1.08 ಲಕ್ಷ ಲೀಟರ್ ಔಷಧಿ ಉಳಿದಿರುತ್ತದೆ. ಇದರ ಮೌಲ್ಯ ರೂ.447.00 ಲಕ್ಷಗಳು.

ಇ) ಶೇ.100 ರಷ್ಟು

ಈ) ಔಷದೋಪಚಾರ ಮಾಡಿದ ಮೇಲೆ ತೆಂಗಿನ ಮರಗಳು ಹಾಳಾಗಿರುವುದಿಲ್ಲ. ಆದರೆ ಕೆಲವು ಅಪರೂಪದ ಪ್ರಕರಣದ ಔಷದೋಪಚಾರದಿಂದ ಪಾರ್ಶ್ವ ಪರಿಣಾಮಗಳು ಉಂಟಾಗಿರುವ ಬಗ್ಗೆ ವರದಿಯಾಗಿದೆ.

ಉ) ಹೌದು. ಕೆಲವು ಸಮಿತಿಗಳ ವರದಿ ಬಂದಿದೆ.

ಯಲಬುರ್ಗ ಮತ್ತು ಕುಷ್ಟಗಿ ತಾಲ್ಲೂಕಿಗೆ ನೀರಾವರಿ ಸೌಲಭ್ಯ

1426 (1721) ಶ್ರೀ ಶಿವ ಶರಣಪ್ಪ ಗೌಡ ಪಾಟೀಲ್ (ಯಲ್‌ಬುರ್ಗ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಪ್ಪಳ ಜಿಲ್ಲೆಯ ಯಲಬುರ್ಗ ಮತ್ತು ಕುಷ್ಟಗಿ ತಾಲ್ಲೂಕುಗಳಿಗೆ (ಯು.ಕೆ.ಪಿ) ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನೀರಾವರಿ ಆಗುವುದು ಸಾಧ್ಯವಿದೆಯೇ;

ಆ) ತಜ್ಞರ ಅಭಿಪ್ರಾಯವೇನು;

ಇ) ಈ ವಿಚಾರದಲ್ಲಿ ಸಾರ್ಕರದ ಅಭಿಪ್ರಾಯ ಏನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕೊಪ್ಪಳ ಜಿಲ್ಲೆಯ ಯಲಬುರ್ಗ ಮತ್ತು ಕುಷ್ಟಗಿ ತಾಲ್ಲೂಕುಗಳಿಗೆ ಕೃಷ್ಣಾ ನದಿಯಿಂದ ನೀರಾವರಿ ಸೌಲಭ್ಯ ಕಲ್ಪಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಆ) -

ಇ) ರಾಜ್ಯದ ಜಲ ನೀತಿಯಲ್ಲಿ ತಿಳಿಸಿರುವಂತೆ ಕರ್ನಾಟಕ ರಾಜ್ಯದ ಅತ್ಯಂತ ಬರ ಪೀಡಿತ ಪ್ರದೇಶಗಳಿಗೆ ನೀರನ್ನು ಒದಗಿಸುವ ಗುರಿ ಹೊಂದಲಾಗಿದೆ. ಈ ನಿಲುವಿನಂತೆ ಕೃಷ್ಣ ಕೊಳದಲ್ಲಿ ಲಭ್ಯವಿರುವ ಹೆಚ್ಚುವರಿ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಸಮಗ್ರ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗುವುದು.

ರಾಜ್ಯದಲ್ಲಿ ಪಡಿತರ ಚೀಟಿಗಳ ವಿತರಣೆ

1427 (1774) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಾರ್ವಜನಿಕರಿಗೆ ವಿತರಿಸಲಾಗಿದ್ದ ಹಸಿರು ಕಾರ್ಡುಗಳನ್ನು ರದ್ದು ಮಾಡುವಾಗ ಸರಿಯಾಗಿ ಸರ್ವೆ ಕಾರ್ಯ ನಡೆದಿದೆಯೇ;

ಆ) ಹಸಿರು ಕಾರ್ಡುಗಳನ್ನು ಯಾವ ಮಾನದಂಡದ ಮೇಲೆ ರದ್ದುಪಡಿಸಲಾಗಿದೆ;

ಇ) ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಎಷ್ಟು ಹಳದಿ ಕಾರ್ಡುಗಳನ್ನು ವಿತರಿಸಲಾಗಿದೆ; ಜಿಲ್ಲಾವಾರು ವಿವರಗಳನ್ನು ನೀಡುವುದು;